ಒಂದು ಕಾಯಿಲೆ ಕಸಾಲೆ ಬಂದು ಮಲಗಿಕೊಂಡರೆ ಏನು ಮಾಡೋದು? ಭಿಕ್ಷೆ ಬೇಡೋಕ್ಕೆ ಆಗುತ್ತಾ? ಮೂರು ಜನ ಮಕ್ಕಳಿದ್ದಾರೆ! ಅವರಿಗೆ ವಿದ್ಯಾಭ್ಯಾಸ, ಮದುವೆ, ಮುಂಜಿ ಮಾಡಬಾರದಾ? ಮುಂದೆ ಮೊಮ್ಮಕ್ಕಳು, ಮರಿಮಕ್ಕಳ ಕಾಲಕ್ಕೂ ನಾವು ಮಾಡೋ ಆಸ್ತಿ, ಕೂಡಿಡೋ ಹಣ ತಲೆ ಕಾಯಬೇಕು... ತಿಳ್ಕೋ...' ಅಂತಿದ್ದರು. ಅಂತೂ ಲಕ್ಷ್ಮಿಯನ್ನ ಒಳ್ಳೆಯ



ಸಂಪ್ರದಾಯಸ್ಥ ಶ್ರೀಮಂತ ಕುಟುಂಬಕ್ಕೆ ಕೊಟ್ಟು ಮದುವೆ ಮಾಡಿ, ಇಬ್ಬರು ಗಂಡುಮಕ್ಕಳಿಗೂ ಕೆಲಸಕ್ಕೆ ಹೋಗೋ ಹೆಣ್ಣುಗಳನ್ನ ತಂದು, ಅವರ ಬಸಿರು, ಬಾಣಂತನ, ಮೊಮ್ಮಕ್ಕಳ ಬರ್ತಡೇ, ಆರತಿ, ಮುಂಜಿ... ಹೀಗೆ ಏನೆಲ್ಲಾ ಸಂಭ್ರಮಾಚರಣೆಗಳನ್ನ ನಮ್ಮ ಬಳಗದಿಂದ ಸೈ ಎನಿಸಿಕೊಳ್ಳುವಂತೆ ಮಾಡಿಲ್ಲ!?...

ನನಗೆ ಹೆಚ್ಚು ಖರ್ಚು ಮಾಡಬಾರದು ಅಂತ ಉಪದೇಶ ಮಾಡುತ್ತಲೇ ಇವರು ಪ್ರತಿ ವರ್ಷ ಅದ್ದೂರಿಯಾಗಿ ಸತ್ಯನಾರಾಯಣ ಪೂಜೆ ಮಾಡಿಕೊಂಡು ಬಂದರು! 'ದೇವರಿಗೆ ಮಾಡಿದರೆ, ನಾವು ಕೊಟ್ಟದ್ದಕ್ಕೆ ಹತ್ತರಷ್ಟು ಹಿಂದಿರುಗಿಸಿ ಕೊಡ್ತಾನೆ... ಸುಮ್ಮನಿರು' ಅನ್ನೋರು. ಆ ಹೂವುಗಳ ಅಲಂಕಾರವೇನು? ಮೇಳವೇನು? ವಾದ್ಯಾರುಗಳಿಗೆ ಕಾಣಿಕೆಗಳೇನು? ಬರುವ ನೆಂಟರು ಇಷ್ಟರುಗಳಿಗೆ ಎಳೆದೆಳೆದು ಕೊಡೋ ದಕ್ಷಿಣೆಯೇನು?... ಜರಿ ಪಂಚೆ, ಶಲ್ಯ ಸುತ್ತಿಕೊಂಡು, ಮೂರು ನಾಮ ಬಳಿದುಕೊಂಡು, ಮಿನುಗೋ ಕೊರಳ ಸರ, ಜನಿವಾರಗಳೊಂದಿಗೆ ಇವರನ್ನ ನೋಡೋದೇ ಒಂದು ಚೆಂದ! ಇವರು ಹೇಳೋದು ಸುಳ್ಳಲ್ಲ! ಆ ನಾರಾಯಣ, ನಾವು ಕೊಟ್ಟದ್ದಕ್ಕೆ, ಹತ್ತರಷ್ಟು ಕೊಟ್ಟ! ಇವರು ಸುಬ್ಬಣ್ಣನವರಿಂದ ವಠಾರವನ್ನೇ ಕೊಂಡುಕೊಂಡು, ಒಡೆಸಿ ಮೂರು ಅಂತಸ್ತಿನ ಮನೆ ಕಟ್ಟಿದರು.. ಅರಸೀಕೆರೆಯಲ್ಲೊಂದು ಸೈಟು ಮಾಡಿದರು. ಗುಬ್ಬಿಯಲ್ಲೊಂದು ಕಟ್ಟಿರೋ ಮನೆ ತೊಗೊಂಡರು. ಹುಟ್ಟೂರು ದೇವಪುರದಲ್ಲಿ ಇಪ್ಪತ್ತು ಎಕರೆ ಜಮೀನು, ಆರೆಕರೆ ತೆಂಗಿನ ತೋಟ, ತೋಟದಲ್ಲೊಂದು ಮನೆ! ಬ್ಯಾಂಕಿನಲ್ಲಿ ಇವರ ಹೆಸರಿನಲ್ಲಿ ಇದ್ದೇ ಇದೆ. ಮೂವರು ಮಕ್ಕಳ ಹೆಸರಿಗೂ ಫಿಕ್ಸೆಡ್! ನನ್ನ ಮತ್ತು ಇವರ ಹೆಸರಿನಲ್ಲಿ ಜಾಯಿಂಟ್ ಅಕೌಂಟ್! ನನ್ನನ್ನ ನಾಮಿನಿ ಮಾಡಿ ಇವರ ಹೆಸರಿನಲ್ಲಿ ಇನ್ಶೂರೆನ್ಸ್! ಏನೆಲ್ಲಾ ಮಾಡಿದರು? ಹೇಗೆಲ್ಲಾ ಕೂಡಿಸಿಟ್ಟರು? ಇಷ್ಟೆಲ್ಲಾ ಮಾಡಿದವರು ತಮ್ಮ ಹೆಸರಿಗೊಂದು ಹೆಲ್ತ್ ಇನ್ಶೂರೆನ್ಸ್ ಮಾಡಿಸಿಕೋಬೇಕಾಗಿತ್ತು, ಅಲ್ಲವ!? ತಮಗೇನೂ ಆಗೋಲ್ಲ, ನಾರಾಯಣನಿದ್ದಾನೆ ಅನ್ನೋ ಧೈರ್ಯ ಇವರಿಗೆ. ಈಗ ಇವರು ಅನಾರೋಗ್ಯವಾಗಿ ಮಲಗಿರೋವಾಗ, ಚಿಕಿತ್ಸೆ ಕೊಡಿಸಲು ಮಕ್ಕಳು ಭಿಕ್ಷೆ ಬೇಡಬೇಕೇ? 'ನಮ್ಮ ತಂದೆ ಶ್ರೀ ಗೋವಿಂದ ಭಟ್ಟರು ಅನಾರೋಗ್ಯಪೀಡಿತರಾಗಿ ರಂಗನಾಥ ನರ್ಸಿಂಗ್ ಹೋಂನಲ್ಲಿದ್ದಾರೆ. ಅವರಿಗೆ ತುರ್ತಾಗಿ ಮಿದುಳಿನ ಸರ್ಜರಿ ಆಗಬೇಕಿದ್ದು, ಇಪ್ಪತ್ತು ಲಕ್ಷ ಖರ್ಚಾಗುತ್ತದೆ. ದಯವಿಟ್ಟು ಈ ಕೆಳಗೆ ನೀಡಿರುವ ಅಕೌಂಟಿಗೆ ನಿಮ್ಮ ಕೈಲಾದಷ್ಟು ಹಣ ವರ್ಗಾಯಿಸಿ ದಾನ ಮಾಡಿ' ಹೀಗೆ ಫೇಸ್‌ಬುಕ್, ವಾಟ್ಸ್‌ಆಪ್ ಎಲ್ಲಾ ಕಡೆ ಸಂದೇಶವನ್ನ ಹರಿಬಿಟ್ಟಿದಾರಂತೆ! 'ನಮಗೂ ಬಂದಿತ್ತು. ಹೀಗೆ